ಅಧ್ಯಕ್ಷರು.—ಯಾವುದೇ ಆಗಲಿ ನೀವು ನನ್ನ ಛೇಂಬರ್‌ಗೆ ಬಂದು ನೋಡಿದರೆ ಅದನ್ನು ತರಿಸಿ ನೋಡುತ್ತೇನೆ.

Fire Accident in Alipur village, Humnabad

ಶ್ರೀ ವಿ. ಎನ್. ಪಾಟೀಲ್.—ಹುಮ್ನಾಬಾದ್ ತಾಲ್ಲೂಕು ಆಲಿಪೂರ್ ಗ್ರಾಮದಲ್ಲಿ ಗುಡಿಸಲುಗಳು ಬೆಂದು ಹೋಗಿ ಅಲ್ಲಿ ಒಬ್ಬ ತಾಯಿ ಮತ್ತು ೫ ಜನ ಮಕ್ಕಳು ಸುಟ್ಟು ಹೋಗಿದ್ದಾರೆ. ಇನ್ನು ೨ ಮಂಕ್ಕಳು ಮಾತ್ರ ಉಳಿದಿವೆ. ಅವು ಅನಾಥರಾಗಿವೆ. ಈಗ ಅವರನ್ನು ಸಂರಕ್ಷಣೆ ಮಾಡುವವರು ಯಾರೂ ಇಲ್ಲ. ಸರ್ಕಾರದವರು ಅವರನ್ನು ಸಂರಕ್ಷಣೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ಹೆಗೆದುಕೊಳ್ಳಬೇಕೆಂದು ನಾನು ಒಂದು ಕಾಲ್ ಅಟೆನ್‌ಷನ್ ಕಳುಹಿಸಿದ್ದೆ. ಅದಕ್ಕೆ ಇದುವರೆಗೂ ಉತ್ತರ ಬರಲಿಲ್ಲ. ಆದುದರಿಂದ ಈ ಬಗ್ಗೆ ನಾಳೆ ನಾಳಿದ್ದರಲ್ಲಾದರೂ ಒಂದು ಉತ್ತರವನ್ನು ತರಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತರಿಸಿ ನೋಡೋಣ.

ಅಧ್ಯಕ್ಷರು.—ನಾನು ೧೧ ಗಂಟೆಗೆ ಆಫೀಸಿಗೆ ಬರುತ್ತೇನೆ. ಅಲ್ಲಿ ಬಂದು ತನ್ನ ಸಹೋದರ ಇಂಥವನ್ನೆಲ್ಲ ಪ್ರಸ್ತಾಪ ಮಾಡಿದರೆ ಏನಾಗಿದೆ ಎಂದು ನೋಡಬಹುದು.

Murder of a School Attender in Anekal

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಒಂದು ತಿಂಗಳ ಹಿಂದೆ ನನ್ನ ಕ್ಷೇತ್ರದಲ್ಲಿರುವ ಒಂದು ಖಾಸಗಿ ಹೈಸ್ಕೂಲಿನಲ್ಲಿ ಆಲ್ಲಿಯ ಕಾರ್ಯದರ್ಶಿ ಒಬ್ಬ ಅಟೆಂಡರನ್ನು ಕೊಲೆಮಾಡಿ ಪತ್ತೆಯಿಲ್ಲದಂತೆ ಮಾಡಿದ್ದಾರೆ. ಅನೇಕ ವೇಳೆ ಪ್ರಾರ್ಥನೆ ಮಾಡಿಕೊಂಡೆ ಮಾಹಿತಿ ತರಿಸಿಕೊಡುತ್ತೇನೆಂದು ಹೇಳಿದಿರಿ. ಈ ಸದನ ಮುಗಿದ ಮೇಲೆ ತರಿಸಿಕೊಡುತ್ತೀರಾ ? ಅದಷ್ಟು ಜಾಗ್ರತೆ ಆ ಮಾಹಿತಿಯನ್ನು ತರಿಸಿ ಕೊಡಬೇಕು.

Affairs of the Peoples Education Society

ಶ್ರೀ ಎಂ ಬಿ. ರಾಮಸ್ವಾಮಿ.—ರಾಜಮಹಲ್ ವಿಲಾಸದಲ್ಲಿ ಒಂದು ಸೈಟನ್ನು ಪೀಪಲ್ಸ್ ಎಜುಕೇಷನ್ ಸೊಸೈಟಿಗೆ ಕೊಟ್ಟಿದ್ದುದನ್ನು ಬೇರೆಯವರಿಗೆ ಪರಭಾರೆ ಮಾಡಿದ್ದಾರೆನ್ನುವ ವಿಷಯ ಪ್ರಸ್ತಾಪ ಮಾಡಿದಾಗ ಸಚಿವರು ಮಾಹಿತಿ ಕೊಡುವುದಾಗಿ ಹೇಳಿದ್ದರು. ಅದನ್ನೂ ಕೊಟ್ಟಿಲ್ಲ. ಈ ಎರಡೂ ವಿಷಯಗಳ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೇನೆ. ಆದಕ್ಕೆ ಮಾಹಿತಿಯನ್ನು ತರಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸರ್ಕಾರಕ್ಕೆ ಅವುಗಳನ್ನೆಲ್ಲ ಕಳುಹಿಸಿಕೊಟ್ಟಿದ್ದೇನೆ. ಬಂದ ತಕ್ಷಣ ಕಾರ್ಯಕ್ರಮದಲ್ಲಿ ಸೇರಿಸುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಒಂದು ತಿಂಗಳಾದರೂ ಉತ್ತರವಿಲ್ಲದೆ ಇದ್ದರೆ ನಾವು ಏನು ಮಾಡಬೇಕು ? ಪೀಪಲ್ಸ್ ಎಜುಕೇಷನ್ ಸೊಸೈಟಿಗೆ ಮಂತ್ರಾಜರು ಕೊಟ್ಟಿರುವ ಜಮೀನನ್ನು ರಾಜ್ಯಪಾಲರ ಆಡಳಿತದಲ್ಲಿ ಬೇರೆಯವರಿಗೆ ಕೊಟ್ಟಿರುವುದರ ಬಗ್ಗೆ ನಾವು ನೋಟೀಸ್ ಕೊಟ್ಟಿದ್ದೇವೆ. ಆ ಬಗ್ಗೆ ವಿವರಣೆಯನ್ನು ಜಾಗ್ರತೆ ಅಸೆಂಬ್ಲಿ ಮುಗಿಯುವುದರೊಳಗೆ ತರಿಸಿಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಆ ರೀತಿ ಡೈರೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ನೋಟೀಸ್ ಬಂದ ತಕ್ಷಣ ೨೪ ಗಂಟೆಗಳೊಳಗೆ ಸಂಬಂಧಪಟ್ಟ ಇಲಾಖೆಗೆ ಕಳುಹಿಸುತ್ತೇವೆ. ಅಲ್ಲಿಂದ ಉತ್ತರಗಳು ಬಂದ ಹಾಗೆ ಅಜೆಂಡದಲ್ಲಿ ಸೇರಿಸಬೇಕಾಗಿ ಬರುತ್ತದೆ. ರೂಲ್ಸ್‌ಗನುಗುಣವಾಗಿ ರಿಮೈಂಡರ್ ಕಳುಹಿಸುತ್ತೇವೆ. ಫೋನ್ ಮಾಡುತ್ತೇವೆ. ಅದಕ್ಕಿಂತ ಹೆಚ್ಚು ಏನೂ ಮಾಡುವುದಕ್ಕಾಗುವುದಿಲ್ಲ.